ಶ್ರೀ ಬಿ. ಎಸ್. ಹೊರಕೇರಿ.—ಬಿಜಾಪುರ ಜಿಲ್ಲೆಯ ಜಮಖಂಡಿ ಹಾಗೂ ಇಂಡಿ ತಾಲ್ಲೂಕ್ ಅಭಿವೃದ್ಧಿ ಸಂಘಗಳ ಅಸ್ತಿತ್ವ ಹೆಚ್ಚಾಗಿದೆಯೋ ಅಥವಾ ಸಾಲವೇ ಹೆಚ್ಚಾಗಿದೆಯೋ?

ಶ್ರೀ ಕೆ. ಎಚ್. ರಂಗನಾಥ್.—ಆ ಮಾಹಿತಿ ಇಲ್ಲ. ಇಲ್ಲಿ ಮಾನ್ಯ ಸದಸ್ಯರು ಒಂದು ವಿಷಯವನ್ನು ಗಮನಿಸಬೇಕು, ಏನೆಂದರೆ, ಒಂದೇ ತರಹದ ಕೆಲಸಗಳನ್ನು ಮಾಡತಕ್ಕಂಥ ಅನೇಕ ಸಂಸ್ಥೆಗಳನ್ನು ಇಟ್ಟುಕೊಳ್ಳುವುದು ಸರಿಯಲ್ಲ ಎಂಬುದನ್ನು; ಈ ದೃಷ್ಟಿಯಿಂದ ತಾಲ್ಲೂಕ್ ಅಭಿವೃದ್ಧಿ ಸಂಘಗಳನ್ನು ಉಳಿಸಿಕೊಳ್ಳುವುದು ಸರಿಯಾದ ಕ್ರಮವಾಗಲಾರದು.

Jurisdiction of Industrial Tribunal and Labour Courts

399. M. S. KRISHNAN (Malleshwaram)—Will the Minister for Labour be pleased to state.—

(*a*) whether jurisdiction of Industrial Tribunal and Labour Courts have been changed recently,

(*b*) whether many cases have been transferred from one court to another and if so, how many cases have been transferred and from which Court/Tribunal to which Court/Tribunal,

(*c*) whether the Presiding Officers to which they are transferred have had any previous experience in respect of Labour Laws,

(*d*) whether it has come to the notice of Government that enormous delay in disposing off the disputes is resulting in hardships to the workmen concerned on account of this?

SRI C. N. PATIL (Minister for Labour).—

(*a*) No.

(*b*) Yes. Statement of cases transferred is appended.

(*c*) All the Presiding Officers are from the cadre of District and Session Judges.

(*d*) Yes. It is because of this that Government have constituted additional Labour Courts in all the districts. In addition two full time courts have been constituted with a view to facilitate quick disposal of all pending labour disputes.

STATEMENT OF CASES TRANSFERRED

From Labour Court Bangalore to			Applications	References
Hubli	...	...	11	209
Hassan	...	...	12	3
Mandya	...	...	58	30
Madikeri	...	...	1	...
Chitradurga	...	...	3	...

From Labour Court Mandya to				
Madikere	...	...	...	1
Hubli	...	...	...	19
Hassan	...	...	33	54
From Labour Court Mangalore to				
Madikere	...	...	5	...
Coickmagalur	...	...	...	5
Hassan	...	...	...	1
Form Labour Court Hubli to				
Gulbarga	...	...	2	...
Bidar	...	...	...	1
Chitradurga	...	...	8	...
Karwar Uttar Kannda		...	1	...
Bellary	...	...	3	...
Raichur	...	...	4	2
Bijapur	...	...	1	5
Form Labour Court, Shimoga to				
Chickmagalur	...	...	25	40
From Labour Court, Chitradurga to				
Madikeri	...	...	...	...

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಎಲ್ಲ ಸಭಾಧ್ಯಕ್ಷರೂ ಜಿಲ್ಲಾ ಹಾಗೂ ಸೆಶನ್ ನ್ಯಾಯಾಧೀಶರ ದರ್ಜೆಯವರೂ ಎಂದು ಮಾಡಿದ್ದೀರಿ. ಈ ಹಿಂದೆ ಮಾನ್ಯ ಪುಟ್ಟಸ್ವಾಮಿಯವರು ಮಂತ್ರಿಗಳಾಗಿದ್ದಾಗ ಈ ಬಗ್ಗೆ ಒಂದು ಮನವಿಯನ್ನು ಸಲ್ಲಿಸಲಾಗಿತ್ತು, ಏನೆಂದರೆ, ಎಲ್ಲಾ ಹಾಗೂ ಸೆಶನ್ ನ್ಯಾಯಾಧೀಶರಾದರೆ ಅವರಿಗೆ ಲೇಬರ್-ಲಾಸ್ ಬಗ್ಗೆ ಹೆಚ್ಚಿನ ವಿಚಾರ ಗೊತ್ತಿರುವುದಿಲ್ಲ, ಆದ್ದರಿಂದ ಇದಕ್ಕಾಗಿ ಸ್ಪೆಷಲ್ ಕೇಡರನ್ನು ಮಾಡಬೇಕೆಂದು. ಆದರೆ ಅದನ್ನು ಕೈಬಿಟ್ಟು ಮತ್ತೆ ಅದೇ ರೀತಿ ಮಾಡುವುದಕ್ಕೆ ಕಾರಣವೇನು?

†ಶ್ರೀ ಸಿ. ಎನ್. ಪಾಟೀಲ್.—ಪೆಂಡೆನ್ಸಿ ಕೇಸಸ್ ಹೆಚ್ಚಿರುವುದರಿಂದ ಮೊದಲಿನ ಕ್ರಮವನ್ನೇ ಪುನಃ ಕೈಕೊಳ್ಳಬೇಕಾಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಪೆಂಡೆನ್ಸಿ ಕೇಸಸ್ ಇದ್ದರೂ ಸಹ. ಟ್ರೇಡ್ ಯೂನಿಯನ್ ಲಾಸ್ ಹಾಗೂ ಲೇಬರ್-ಲಾಸ್ ಇವರಿಗೆ ಹೆಚ್ಚು ಗೊತ್ತಿಲ್ಲದಿರುವುದರಿಂದ ಇದಕ್ಕಾಗಿಯೇ ಬೇರೆ ಒಂದು ಕೇಡರನ್ನು ಮಾಡುವುದು ಒಳ್ಳೆಯದೆಂದು ಸರ್ಕಾರದವರು ಈ ಮೊದಲು ಒಪ್ಪಿಕೊಂಡಿದ್ದರೂ ಸಹ ಅದರಂತೆ ಮಾಡದಿರಲು ಕಾರಣವೇನು? ಇಲ್ಲಿ ಕೇಸ್‌ಗಳು ತೀರ್ಮಾನವಾಗುವುದು ನಿಧಾನವಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದೀರಿ. ಆದ್ದರಿಂದ ಈ ಬಗ್ಗೆ ಕಾನೂನು ತಿಳಿದಿರುವವರನ್ನೇ ನೇಮಕ ಮಾಡಿದರೆ ಪೆಂಡೆನ್ಸಿ ಕೇಸಸ್ ಜಾಗ್ರತೆ ಡಿಸ್‌ಪೋಸ್ ಆಗುವುದಿಲ್ಲವೇ?

ಶ್ರೀ ಸಿ. ಎನ್. ಪಾಟೀಲ್.—ಪೆಂಡೆನ್ಸಿ ಕೇಸಸ್ ಹೆಚ್ಚಾಗಬೇಕಾದರೆ ಕಾರಣ, ಕಾನೂನು ತಿಳಿದಂಥ ಜಡ್ಜ್ ಇಲ್ಲ ಎಂಬುದಲ್ಲ, ಈ ಪ್ರಿಸೈಡಿಂಗ್ ಆಫೀಸರ್‌ಗಳನ್ನು ಹೈಕೋರ್ಟಿನವರು ಸರಿಯಾಗಿ ಒದಗಿಸದೇ ಹೋದ ಕಾರಣ ಕೆಲವು ಹುದ್ದೆಗಳು ಹಲವಾರು ತಿಂಗಳು ಕಾಲ ಖಾಲಿ ಬಿದ್ದಿದ್ದರಿಂದ ಕೇಸ್‌ಗಳು ತೀರ್ಮಾನವಾಗುವುದು ನಿಧಾನವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಜಿಲ್ಲಾ ಹಾಗೂ ಸೆಶನ್ ನ್ಯಾಯಾಧೀಶರು ಇರುವುದು ಬೇಡ ಎಂದೇ ಲೇಬರ್ ಕೋರ್ಟುಗಳನ್ನು ಮಾಡಿದರಂ. ಆದರೆ ಈಗ ಪುನಃ ಮೊದಲಿನ ತರಹವೇ ಮಾಡಿದ್ದಾರೆ. ಈ ಅವಧಿಯೋಳಗೆ ವರ್ಗಾಯಿಸಲಾದ ಪ್ರಕರಣಗಳ ಲೆಕ್ಕವನ್ನು ಸಹ ಇಲ್ಲಿ ಕೊಟ್ಟಿದ್ದಾರೆ. ಈ ರೀತಿ ವರ್ಗಾವಣೆ ಮಾಡುವುದರಲ್ಲಿಯೇ ಒಂದು ವರ್ಷ ನಿಧಾನವಾದ ಕಾರಣ ಅನೇಕ ಜನ ಕಾರ್ಮಿಕರಿಗೆ ನ್ಯಾಯ ದೊರಕಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಸಿ. ಎನ್. ಪಾಟೀಲ್.—ಹಲವಾರು ತಿಂಗಳ ಕಾಲ ವಿಳಂಬ ಆಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ.

Granting of Road Site in Chickballapur

447. SRI C. BYRE GOWDA (Vemagal)—Will the Minister for Municipal Administration and Political Pensions be pleased to state.-

(*a*) whether a road site in Sri A J. Khan Layout in Chickballapur measuring E.W. 100′ × N.S. 40′ was handed over by the Municipal Administrator on 4th September 1974 to Sri C. V. Venkatarayappa, M.L.A. on nominal rent of Rs. 25 per month;

(*b*) the name of the Municipal President who approved the above noted layout plan, etc;

(*c*) whether the Deputy Commissioner, Kolal had suspended a resolution passed by the Administrator granting the above Road site to Sri C. V. Venkatarayappa on receipt of the representation of the Public.

(*d*) if so, the action taken against the persons concerned?

SRI D. K. NAIKAR (Minister for Municipal Administration and Political Pensions).—

(*a*) Yes.

(*b*) Sri C. V. Venkatarayappa M.L A.

(*c*) Yes.

(*d*) The Government Order was communicated to Sri C. V. Venkatarayappa, M L. A. with the intimation to reassign the property leased immediately besides cancelling the Registered Deed executed on 4th October 1974.

ಶ್ರೀ ಸಿ. ಬೈರೇಗೌಡ —ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದಿರಿ. ಈ ರೀತಿ ಸೈಟನ್ನು ಮಂಜೂರು ಮಾಡಬೇಕಾದರೆ ನಿಯಮಾಗಳೇನಾದರೂ ಇದೆಯೇ? ಮತ್ತು ಈ ಸೈಟ್‌ಗಾಗಿ ಇವರೊಬ್ಬರದ್ದೇ ಅರ್ಜಿ ಇತ್ತೋ ಅಥವಾ ಬೇರೆಯವರೂ ಅರ್ಜಿ ಹಾಕಿದ್ದರೋ?

†ಶ್ರೀ ಡಿ. ಕೆ. ನಾಯ್ಕರ್.—ನಿಯಮಗಳ ಪ್ರಕಾರ ಮಾಡಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಈ ಸೈಟ್ ಬಗ್ಗೆ ಬೇರೆಯವರೂ ಅರ್ಜಿ ಹಾಕಿದ್ದರೋ ಅಥವಾ ಇಲ್ಲವೋ ಎಂಬ ಮಾಹಿತಿ ಈಗ ನನ್ನ ಹತ್ತಿರ ಇಲ್ಲ.